ನಗರಸಭೆಗಳ ಜಿಲ್ಲಾ ಪರಿಷತ್ ಹಾಗೂ ಮಂಡಲಪಂಚಾಯತಿಗಳ ಅಧಿಕಾರಾವಧಿಯನ್ನು ೫ ವರ್ಷಕ್ಕೆ ಏರಿಸಂವ ಬಗ್ಗೆ

೧೪೬೮ ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾಪರಿಷತ್ತು, ಮಂಡಲ ಪಂಚಾಯತಿ ಅಧಿಕಾರಾವಧಿ ಮತ್ತು ನಗರಸಭೆಗಳ ಅಧಿಕಾರಾವಧಿಯಲ್ಲಿ ಮತ್ತು ಅವುಗಳ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನರು ಉಪ ಪ್ರಧಾನರು ಮತ್ತು ಸದಸ್ಯರ ಸಂಭಾವನೆಗಳಲ್ಲಿ ತಾರತಮ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ತಾರತಮ್ಯಗಳನ್ನು ಸರಿಪಡಿಸಿ, ನಗರಸಭೆಗಳ ಅಧಿಕಾರಾವಧಿಯನ್ನು ೫ ವರ್ಷಕ್ಕೆ ಏರಿಸಲು ಸರ್ಕಾರದವರು ಯೋಚಿಸಿದ್ದಾರೆಯೇ,

ಇ) ನಗರಸಭೆಗಳ ಪುರಸಭೆಗಳ ಅಧ್ಯಕ್ಷರ ಸಂಭಾವನೆಗಳನ್ನು ಮತ್ತು ಸದಸ್ಯರ ಸಂಭಾವನೆಗಳನ್ನು ಮಂಡಲ ಪಂಚಾಯತಿಯಂ ಮಟ್ಟಕ್ಕೇರಿಸಲು ಸರ್ಕಾರದವರು ಯೋಚಿಸಿದ್ದಾರೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ಬಂದಿರುತ್ತದೆ.

ಆ) ಪರಿಶೀಲಿಸಲಾಗುವುದು.

ಇ) ಇಲ್ಲ.

ಹೊಸೂರು ಗ್ರಾಮದಲ್ಲಿ ಕ್ರೀಡಾಂಗಣ ಕಟ್ಟುವ ಬಗ್ಗೆ

೬೯೦ ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲ ಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಭೂಸೇನಾ ನಿಗಮದವರು ಕಟ್ಟುತ್ತಿರುವ ಗ್ರಾಮಾಂತರ ಕ್ರೀಡಾಂಗಣ ನಿರ್ಮಿಸಂವ ಕೆಲಸ ಅರ್ಧಕ್ಕೆ ನಿಂತಿದ್ದು ಸರಕಾರದವರ ಗಮನಕ್ಕೆ ಬಂದಿದೆಯೆ ?

೨) ಹಾಗಿದ್ದಲ್ಲಿ ಅದನ್ನು ಪೂರ್ತಿಗೊಳಿಸಲು ಸರಕಾರದವರು ಯಾವ ಕ್ರಮವನ್ನು ಕೈಗೊಂಡಿದ್ದಾರೆ ?

೩) ಅದನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಮತ್ತು ವಕ್ಫ್ ಮಂತ್ರಿಗಳು).—

೧) ಬಂದಿದೆ.

೨) ಸದರಿ ಕಾಮಗಾರಿಯನ್ನು ೧೯೮೭-೮೮ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಂ ಕ್ರಮಯೋಜನೆಯಡಿಯಲ್ಲಿ ಅಳವಡಿಸಿಕೊಂಡು ಪೂರ್ತಿಗೊಳಿಸಲು ವಿಶೇಷ ಜಿಲ್ಲಾಧಿಕಾರಿ (ಅಭಿವೃದ್ಧಿ) ಬೆಳಗಾಂರವರಿಗೆ ಆದೇಶಿಸಿರುತ್ತದೆ.

೩) ೧೯೮೭-೮೮ನೇ ಸಾಲಿನಲ್ಲಿ ಪೂರ್ತಿಗೊಳಿಸಲಾಗುವುದು.

ಕುಷ್ಟಗಿ ತಾಲ್ಲೂಕಿನಲ್ಲಿ ಬೋರ್‌ವೆಲ್‌ಗಳನ್ನು ತೆಗೆಯಂವ ಬಗ್ಗೆ

೧೯೬೦ ಶ್ರೀ ಶ್ರೀರಂಗದೇವರಾಯಲು (ಕನಕಗಿರಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಷ್ಟಗಿ ತಾಲ್ಲೂಕು ತಾವರಗೇರಾ ಬಸಣ್ಣ ಕ್ಯಾಂಪಿನಲ್ಲಿ ನೀರಿನ ಅನಾವಶ್ಯವಿರುವುದರಿಂದ ಈವರೆಗೂ ಇಲ್ಲಿ ಕೊಳವೆ ಭಾವಿಗಳನ್ನು ಹಾಕದೇ ಇರುವುದಕ್ಕೆ ಕಾರಣವೇನು ?